ತೂಕಾ ಹಾಕ್ದೆ ಗಾಳ ನೀರಿಗ್ ಬಿಡಲ್ಲ... ಅಂತದ್ರಲ್ಲಿ ಯಾಕೆ ಅಂತ ಕೇಳ್ತೀರಲ್ಲ. ಮೀನು ಹಿಡಿಯೋದರ ಬಗ್ಗೆ ಏನೂ ಗೊತ್ತಿಲ್ದೆ ಪೆದ್ದುಪೆದ್ದಾಗಿ ಆಡೋರ್‌ಗೆ ಇದೆಲ್ಲಾ ಹೇಳಕ್ಕಾಗಲ್ಲ... ಅಂತವ್ರು ತೂಕ ಹಾಕ್ದೆ ಗಾಳಾನ ಸುಮ್ನೆ ನೀರಲ್ಲಿ ಅಲ್ಲಾಡಿಸಬಹುದು...'

'ಅಂದ್ರೆ ನೀನು ಹೇಳ್ತಿರೋದು ರೈಲ್ವೆ ಹಳಿಯಿಂದ ನೀನು ನಟ್ ತೆಗಿಯೋದು ಮೀನು ಹಿಡಿಯೋ ಗಾಳಕ್ಕೆ ತೂಕ ಬರ್ಲಿ ಅಂತ ಕಟ್ಟಕ್ಕೆ?'

'ಮತ್ತಿನ್ನಾಕೆ? ಅದ್ರಿಂದೇನು ಹುಲಿ ಘಟ್ಟ ಆಡಕ್ಕಾ?'

'ನಟ್ ಬದಲು ನೀನು ಸೀಸದ ಗುಂಡು ಅಥವಾ ಒಂದು ಮೊಳೆ, ಹಾಗೇನಾದ್ರೂ ಕಟ್ಟಬಹುದಲ್ವಾ...?'

'ಓ! ಸೀಸದ ಗುಂಡು ರಸ್ತೇಲೆ ರಾಶಿ ಬಿದ್ದಿರತ್ತೆ ನೋಡಿ... ಯಾರ್ ಬೇಕಾದ್ರು ತೊಗೊಂಬೋದು ಅನ್ನೋ ಹಾಗೆ? ಅದಕ್ಕೆ ದುಡ್ಡು ಕೊಟ್ಟು ಕೊಂಡ್ಕೊಳ್ಳೇಕು. ದುಡ್ಡು! ಮೊಳೆ... ಮೊಳೆ ಅಷ್ಟು ಸರಿಯಿಲ್ಲ. ನಟ್‌ಗಿಂತಾ ಒಳ್ಳೇದು ಬೇರೆ ಯಾವ್ದೂ ಇಲ್ಲ... ಅದು ಸಕತ್ ಭಾರ...



ಮತ್ತೆ ಅದನ್ನ ಕಟ್ಟಕ್ಕೆ ಒಳ್ಳೇ ತೂತಿರುತ್ತೆ...'

'ಯಾರಯ್ಯಾ ಇವನು... ಒಳ್ಳೇ ಶತಮೂರ್ಖನ ತರಹ ಮಾತಾಡ್ತಿದ್ದಾನೆ! ನೀನೇನು ಪ್ರಪಂಚ ಜ್ಞಾನ ಇಲ್ದಿರೋ ನೆನ್ನೆ ಮೊನ್ನೆ ಹುಟ್ಟಿರೋನಾ... ಇಲ್ಲಾ ಆಕಾಶದಿಂದ ಈಗ ಉದ್ರಿರೋನಾ... ಏನೂ ಗೊತ್ತಿಲ್ಲದವನ ಹಾಗೆ ಆಡ್ತಾನೆ... ಅಲ್ಲಯ್ಯಾ, ರೈಲ್ವೆ ಹಳಿಯಿಂದ ನಟ್ ತೆಗೆದ್ರೆ ಏನಾಗುತ್ತೇಂತ ನಿನಗೇನಾದ್ರೂ ಜ್ಞಾನ ಇದೆಯೋ ಇಲ್ಲವೋ? ನೀನು ನಟ್ ತೆಗೆಯೋದನ್ನ ನೋಡಿ ರೈಲ್ವೆ ಹಳಿ ಕಾವಲುಗಾರ ಹಿಡಿಯದೇ ಇದ್ದಿದ್ರೆ, ರೈಲು ಬಿದ್ದು ಹೋಗಿ ನೂರಾರು ಜನ ಮರಣ ಹೊಂದುತ್ತಿದ್ರು. ನಟ್ ತೆಗೆದು ಜನರ ಸಾವಿಗೆ ನೀನು ಕಾರಣವಾಗ್ತಿದ್ದೆ. ಗೊತ್ತಾ?'

'ಅಯ್ಯೋ ದೇವ್ರೆ! ಎಂಥಾ ಮಾತೂಂತ ಆಡ್ತೀರಿ... ನಾನ್ಯಾಕೆ ಜನಾನ ಸಾಯಿಸ್ಬೇಕು? ನಾವೇನಂಥಾ ಕೆಟ್ಟ ಜನಾನಾ? ದೇವ್ರೇ ಗತಿ. ಬೇರೇವ್ರಿಗೆ ಕೆಟ್ಟಾಗ್ಬೇಕು ಅಂತ ನಾವ್ಯಾವತ್ತೂ ಯೋಚ್ನೇ ಕೂಡಾ ಮಾಡೋವ್ರಲ್ಲ. ನಾವಂಗೆ ಬದ್ಕಿರೊವ್ರು. ದೇವ್ರೇ ಕಾಪಾಡಪ್ಪ! ಏನು ಸ್ವಾಮಿ ನೀವೇಳೋದು... ನಾನು ಜನ ಸಾಯ್ಲಿ ಅಂತ ಮಾಡ್ತೀನಾ?'

'ಮತ್ತೆ? ಓಡೋ ರೈಲುಗಳು ಬೀಳೋದು, ಜನ ಸಾಯಾದೋ ಇನ್ನು ಹೇಗೆ ಮತ್ತೆ? ರೈಲು ಹಳಿಯಿಂದ ಒಂದೋ ಎರಡೋ ನಟ್ ತೆಗೆದು ಬಿಟ್ರೆ ಸಾಕು ಅಪಘಾತ ಆಗೋದಂತೂ ಖಾತರಿ'.

ಬಿಟ್ಟಗಣ್ಣು ಬಿಟ್ಟುಕೊಂಡು ನಂಬಲಿಕ್ಕೇ ಆಗದೆ ಡೆನಿಸ್ ಮ್ಯಾಜಿಸ್ಟ್ರೇಟರನ್ನೇ ದಿಟ್ಟಿಸಿ ನೋಡುತ್ತಿರುತ್ತಾನೆ. 'ಅಯ್ಯಪ್ಪಾ! ನಮ್ಮಳ್ಳೀ ಜನ ನಾವೆಷ್ಟು ಕಾಲ್ದಿಂದ ನಟ್‌ಗಳ್ನ ತೊಗೊಂಡೋಗ್ತಿದ್ದೀವಿ. ಸದ್ಯ ದೇವ್ರು ದೊಡ್ಡೋನು. ನಮ್ಮಿಂದ ಯಾವ್ದೇ ರೈಲು ಬಿದ್ದಿರಲ್ಲ. ಜನ ಸತ್ತಿಲ್ಲ... ಅಲ್ಲ, ನೀವೇಳ್ತೀರಿ ನಾವು ಜನಾನ ಸಾಯಿಸ್ತಿದ್ದೀವಿ ಅಂತ... ಹಂಗಿದ್ರೆ, ಹಳೀನೇ ಕಿತ್ತಾಕ್ಬೋದಿತ್ತು... ಇಲ್ವೇ, ಹಳಿ ಮೇಲೆ ಒಂದು ಮರದ ದಿಮ್ಮಿ ಹಾಕ್ಬೋದಿತ್ತು... ಅವಾಗ ರೈಲು ಬೀಳ್ತಿತ್ತೇನೋ... ನಾವಂತದ್ದೆಲ್ಲಾ ಮಾಡೋವ್ರಲ್ಲ. ಒಂದು ನಟ್ ತೆಗೆದ್ರೆ...!? ಏನೇಳ್ತೀರಿ ಸ್ವಾಮಿ?!'

'ಆದರೆ ನಿನಗೆ ಗೊತ್ತಾ... ರೈಲ್ವೆ ಹಳಿಯ ಪಟ್ಟಿಗಳನ್ನ ಅದರ ಕೆಳಗಿರೋ ಮರದ ದಿಮ್ಮಿ ಹಲಗೆಗಳಿಗೆ